ದಿನಾಂಕ.17-04-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಖ್ಯ ವಿಚಾರಣೆ:** ವಾದಿ ಪರ ಶ್ರೀ ಎನ್ ಆರ್ ಬಿ ವಕೀಲರಿಂದಃ

14. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಅದರಲ್ಲಿರುವ ವಿಷಯಗಳು ಸತ್ಯವಾಗಿದ್ದು, ಅವುಗಳನ್ನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ.

15. ದಾವಾ ಸ್ವತ್ತಿನ ಎರಡು ಆರ್ ಟಿ ಸಿ ಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.1 ಮತ್ತು ನಿ.ಪಿ.2 ಎಂದು, ಮ್ಯೂಟೇಷನ್ ಸಂಖ್ಯೆ 838 ರ ಮ್ಯೂಟೇಷನ್ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿ.ಪಿ.3 ಎಂದು, ಎಂ ಆರ್ ಹೆಚ್ 9/2019-20 ರ ಮ್ಯೂಟೇಷನ್ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿ.ಪಿ.4 ಎಂದು, ದಾವಾ ಮನೆ ಆಸ್ತಿಯ 2021-22 ನೇ ಸಾಲಿನ ಆಕರಣೆ ಯಾದಿಯನ್ನು ಹಾಜರು ಪಡಿಸಿದ್ದು, ಅದನ್ನು ನಿ.ಪಿ.5 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ** 2 ನೇ ಪ್ರತಿವಾದಿ ಪರ ಶ್ರೀ ಎಂ ಪಿ ಬಿ ವಕೀಲರಿಂದಃ

16. ನನಗೆ ಮದುವೆಯಾಗಿ 21 ವರ್ಷ ಆಯಿತು. ನನ್ನ ಮದುವೆ ಕಾಲದಲ್ಲಿ ನನಗೆ ಬಂಗಾರದ ಒಡವೆಗಳನ್ನು ಉಡುಗೊರೆಯಾಗಿ ಕೊಟ್ಟಿರಲಿಲ್ಲ. ನ್ಯಾಯಾಲಯದ ಒಳಗಡೆ ಪ್ರತಿವಾದಿ 1 ಮತ್ತು 2 ರವರು ಹಾಜರಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ಪ್ರಾಯಸ್ತನಾದ ನಂತರ ನಮ್ಮ ಕುಟುಂಬದ ಜಮೀನನ್ನು ಅವರೆ ನೋಡಿಕೊಳ್ಳುತ್ತಿರುವುದು ಎಂದರೆ ಸರಿ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಹಾಗೂ ನಂತರ ದಾವಾ ಸ್ವತ್ತಿನ ಉತ್ಪನ್ನವನ್ನು 1 ನೇ ಪ್ರತಿವಾದಿಯೆ ಪಡೆದುಕೊಳ್ಳುತ್ತಿದ್ದಾರೆ. 1 ನೇ ಪ್ರತಿವಾದಿಗೆ ದಾವಾ ಜಮೀನಿನ ಉತ್ಪನ್ನ ಬಿಟ್ಟು ಬೇರೆ ನೌಕರಿ ಇರುವುದಿಲ್ಲ. 1 ನೇ ಪ್ರತಿವಾದಿ

ಕಟ್ಟಿರುವ ಮನೆಯನ್ನು ತೋಟದ ಜಮೀನಿನಿಂದ ಬಂದ ಆದಾಯದಿಂದ ಕಟ್ಟಿರುವುದಾಗಿರುತ್ತದೆ. 1 ನೇ ಪ್ರತಿವಾದಿಯ ಲಗ್ನದ ಖರ್ಚನ್ನು ನಾನು ಹಾಗೂ 2 ನೇ ಪ್ರತಿವಾದಿ ಅವರೊಟ್ಟಿಗೆ ಇದ್ದಾಗ ಸೇರಿ ಭರಿಸಿರುವುದು. 1 ನೇ ಪ್ರತಿವಾದಿ ಮನೆಯ ಯಜಮಾನಿಕೆ ಮಾಡಲು ಪ್ರಾರಂಭಿಸಿದ ನಂತರ ಬ್ಯಾಂಕ್‌ನಲ್ಲಿ ಮತ್ತು ಸಹಕಾರಿ ಸಂಘಗಳಲ್ಲಿ ಸಾಲ ಮಾಡಿದ್ದಾರೆ ಎಂದರೆ ಸರಿ. ಆ ಸಾಲವನ್ನು ಈಗ್ಗೆ ಎರಡು ವರ್ಷಗಳಿಂದ ಪಾವತಿಸದೆ ಅವರು ಹಾಗೇನೆ ಬಿಟ್ಟಿದ್ದಾರೆ. ಆ ಸಾಲದ ಹಣದಲ್ಲಿ ನನಗೆ ಹಾಗೂ 2 ನೇ ಪ್ರತಿವಾದಿಗೆ ಯಾವುದೆ ಹಣ ಕೊಟ್ಟಿಲ್ಲ. ದಾವಾ ಸ್ವತ್ತಿನಲ್ಲಿ ಮೂರು ಪಾಲು ಮಾಡಿ 2 ನೇ ಪ್ರತಿವಾದಿಗೆ ಒಂದು ಭಾಗ ಕೊಡುವುದಕ್ಕೆ ನನ್ನದೇನು ಅಭ್ಯಂತರ ಇಲ್ಲ ಎಂದರೆ ಸರಿ.

17. ದಾವಾ ಸ್ವತ್ತುಗಳ ಅಕ್ಕ ಪಕ್ಕದಲ್ಲಿ ಜಮೀನನ್ನು ಅತಿಕ್ರಮಣ ಮಾಡಿ ತೋಟ ಮಾಡಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನ ಉತ್ಪನ್ನವನ್ನು ಮಾರಾಟ ಮಾಡಿ ಬಂದ ಹಣವನ್ನು 1 ನೇ ಪ್ರತಿವಾದಿಯೆ ಸ್ವತಃ ಉಪಯೋಗಿಸುತ್ತಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನ ಉತ್ಪನ್ನದಿಂದ ಬಂದ ಹಣವನ್ನು ನನ್ನ ಬ್ಯಾಂಕ್ ಖಾತೆಗಳಲ್ಲಿ ಇಟ್ಟಿದ್ದೆ ಇರುವುದಿಲ್ಲ ಎಂದರೆ ಸರಿ.

(ಶ್ರೀ ಆರ್ ಎನ್ ಹೆಚ್ ವಕೀಲರ ವಿನಂತಿಯ ಮೇರೆಗೆ ಪಾಟಿ ಸವಾಲನ್ನು ಮುಂದುಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.